ಕೇಳ್ತಿಷ್ನಿ. ನಂಗೆ ಅಪ್ಪಯ್ಯಾ ಬೇಕು. ನಂಗಾಗಿ ಅಪ್ಪಯ್ಯ ಸಾಯೋದು ಬ್ಯಾಡಾ ಕಣವ್ವಾ" ಕಣ್ಣೀರಾಕ್ತಾ ಹೇಳಿದಳು.

''ಇದೇನೆ ಸಣ್ಣಿ, ಇಂಗಂತೀಯಾ. ಮದ್ವೆ ಏನು ಶಾನೆ ದಿನಾ ಐತಾ, ಒಂದ್ವಾರ ಕಳ್ದರೆ ನೀನು ಹಸೆಮಣೆ ಮ್ಯಾಲೆ ಕುಂತ್ಕ ಬೇಕು. ಈವಾಗ ಮದ್ವೆ ಬ್ಯಾಡಾ ಅಂದ್ರೆ ಅವ್ರು ಸುಮ್ಕಿರ್ತಾರಾ, ಜನಾ ತಾನೆ ಏನಂತ್ಕತ್ತಾರೆ. ನಿಂಗೆ ಮದ್ವೆ ಇಷ್ಟ ಇಲ್ದೆ ವೋಗಿದ್ರೆ ಆಗ್ಲೆ ಯೊಳಬೇಕಾಗಿತ್ತು ಅಂತ ಅನ್ನಾಕಿಲ್ವ. ನಾ ಯ್ಯಾನು ಈ ಭೂಮಿ ಮ್ಯಾಕೆ ಇರಬ್ಯಾಕೊ ಬ್ಯಾಡ್ವಾ ಏಳು" ಎಂದ ಕೆಂಪಿಗೆ ಮಗಳ ನಿರ್ಧಾರ ದಿಗಿಲು ಹುಟ್ಟಿಸಿತ್ತು.

''ನಂಗೇನು ಗೊತ್ತಿಲ್ಲ ಕಣವ್ವ, ಅಪ್ಪಯ್ಯಾ ಸಾಯಬಾರದು ಅಟೇಯಾ. ನಂಗೆ ಈ ಲಗ್ನ ಗಿಗ್ನ ಯ್ಯಾನೂ ಬ್ಯಾಡಾ, ನಾನು ಲಗ್ಣನೇ ಆಗಕಿಲ್ಲ,ಇಂಗೇ ಇದ್ದ ಬುಡ್ತಿನಿ. ಗಂಡ್ನೋರ್ಗೆ ನನ್ನ ಮಗ್ಳು ಲಗ್ಣ ಆಗಾಕಿಲ್ಲ ಅಂತ ನೀನೇ ಯೋಳಿಬುಡು. ಅವರು ಏನಾದ್ರೂ ಮಾಡ್ಕಳ್ಳಿ" ಅಂದು ಬಿಟ್ಟಳು.

''ಬ್ಯಾಡಾ ಕಣಮ್ಮಿ, ಅಂಗೆಲ್ಲಾ ಅನ್ನಬ್ಯಾಡಾ. ಈಟೇಲ್ಲಾ ಆದಾಮ್ಯಾಕೆ ಲಗ್ಣ ಬ್ಯಾಡಾ ಅನ್ನಬ್ಯಾರದು ಕನವ್ವ. ಸುಮ್ಕೆ ನಿಮ್ಮಪ್ಪಯ್ಯಾ ಯೇನೇನೋ ಏಳ್ತಾನೆ ಅಂತ ಕ್ಯಾಳ ಬ್ಯಾಡಾ ಕಣವ್ವ, ನಿಂಗೆ ಒಳ್ಳೆದಾಗಕಿಲ್ಲ, ಲಗ್ಣಪತ್ರಿಕೆ ಎಲ್ಲಾರ್ಗೂ ಅಂಚಾಗೈತೆ. ಇನ್ನೇನು ನಾಳೇಕೊ ನಾಡಿದ್ದೊ ನೆಂಟ್ರೂ ಬಂದು ಬುಡ್ತಾರೆ. ಈಗ ಇಂಗಂದ್ರೆ ಎಂಗವ್ವ, ನಮ್ಮ ಮಾನ ಮರ್ವಾದೆ ಏನಾಗ ಬ್ಯಾಡಾ, ನೀನೇ ಏಳವ್ವಾ" ಎಂದು ಅಂಗಾಲಾಚಿ ಮಗಳ್ನ ಬೇಡತೊಡಗಿದಳು.

ಈರಾ ಮಾತ್ರಾ ಒಂದು ಮಾತಾಡದೆ ಕುಂತು ಬಿಟ್ಟಿದ್ದ. ಹೆಂಡ್ತಿ ಮ್ಯಾಲೆ ಶಾನೆ ಕ್ವಾಪ ಬರ್ತಾ ಇದ್ದರೂ ರೆಟ್ಟೆಯಲ್ಲಿ ಸಕ್ತಿ ಇಲ್ಲದ ಈರಾ ಕೈಲಾಗ್ದೆ ಮಗಳ್ನೆ ಮುಳ ಮುಳ ಅಂತ ನೋಡ್ತಾ ಇದ್ದು ಬಿಟ್ಟಾ.

''ಇಲ್ಲಕನವ್ವ, ನಾನ್ ಮಾತ್ರಾ ಈ ಲಗ್ನ ಆಗಕಿಲ್ಲ. ಈಗಾ ಸುಮ್ಕೆ ಮನ್ಗೋಗುವ ನಡೆ. ಅಪ್ಪಯ್ಯಾ, ಯ್ಯಾಳು ಮ್ಯಾಕೆ, ಬೀದಿಲ್ಯಾಕೆ ಈ ಪುರಾಣ ಯಲ್ಲಾ ನಡಿಯವ್ವ. ಪುಟ್ಟೀರಣ್ಣ ನಮ್ಮಪ್ಪಯ್ಯನ ಪೀರಾಣ ಉಳ್ಸಿ ಬುಟ್ಟು ಶಾನೇ ಉಪ್ಕಾರ ಮಾಡ್ದೆ ಕಣಣ್ಣ. ನಿನ್ನ ಉಪ್ಕಾರನಾ ಈ ಜನ್ಮದಲಿ ತೀರ್ಸಕಾಗಾಕಿಲ್ಲ ಕಣಣ್ಣ. ನಾವು ಬತ್ತೀವಿ'' ಎಂದವಳೆ ಈರನ್ನ ಮ್ಯಾಲಕೆತ್ತಿ ಎಗಲು ಇಡ್ಕಂಡು ಮನೆಯತ್ತ ನಡೆಯ ತೊಡಗಿದ್ಲು. ಕೆಂಪಿ ಅವಳಿಂದೆ ಮೆಲ್ಲಕೆ ಎಜ್ಜೆ ಆಕಿದ್ಲು. ದಾರಿವೂದ್ದಕ್ಕೂ ಊರವ್ರೂ ಕೇಳೊ ಪ್ರಶ್ನೆಗಳಿಗೆ ಉತ್ತರ ಕೊಡಕಾಗದೆ ಕತ್ತ ಬಗ್ಗಿಸಿ ಮನೆ ಸೇರಿಕೊಂಡು ಬಿಟ್ಟರು.

ಕೆಂಪಿ ಮನ್ಯಾಗೆ ಬಂದು ಗರ ಬಡ್ಡವ್ರಂಗೆ ಸುಮ್ಕೆ ಕುಂತ್ಕಂಡ್ಬುಟ್ಟಳು. ಅವಳ್ಗಂತೂ ಗಂಡ ಮಾಡಿದ್ನ ಸಹಿಸೋಕೆ ಆಗ್ತಾ ಇಲ್ಲಾ. ಎಂಗೋ ಮಗಳ ಮದ್ವೆ ಆಗ್ತಾ ಐತೆ ಅಂತ ಅಂದು ಕೊಂಡಿರುವಾಗ್ಲೆ ಇವನ್ದೇನು ಕಿತಾಪತಿ. ಇವ್ನು ಇಂಗಾಡ್ತನೆ ಅಂದಿದ್ರೆ, ಇಷ್ಟಿಗೂ ಗೊತ್ತಾಗ್ದಂಗೆ ಯಾವ್ದಾದ್ರೂ ದ್ಯಾವರ ಗುಡಿಲಿ ತಾಳಿ ಕಟ್ಟಿಸಬೌದಿತ್ತು. ಅಪ್ಪ ಅನ್ನಸ್ಕೊಂಡ ಪಾಪಿ ಈಗಾ ಮದ್ವೆನೆ ಮುರ್ಯೋಕೆ ವೊಂಟವ್ನನಲ್ಲ, ಯ್ಯಾನು ಮಾಡ್ಲಿ ನನ್ನಪ್ಪ. ಮಗ್ಳ ಮನ್ಸ ಕೆಡ್ಸಿ ಬುಟ್ಬೊವ್ನನಲ್ಲ. ಈ ಲಗ್ನ ಆಗ್ದೆ ಇದ್ರೆ ಈ ಊರಲ್ಲಿ ತಲೆ ತಲೆ ಎತ್ಕಂಡು ತಿರ್ಗ್ಗದೊ ಎಂಗಪ್ಪ. ದ್ಯಾವ್ರೆ ನೀನೆ ದಾರಿ ತೋರ್ಸಪ್ಪ' ಅಂತ ಕಾಣದ ದ್ಯಾವ್ರಿಗೆ ಮನಸ್ನಲ್ಲೆ ಕೈ ಮುಗಿಯುತ್ತಾ ಬೇಡಿಕೊಳ್ಳುತ್ತ ಕುಂತ್ಕಂಡಿರುವಾಗಲೇ ರಾವಣ ಕೀಚಕರು ತೂರಾಡ್ತಾ ಮನೆ ಒಳಿಕೆ ಬಂದು ''ಏ ಸಣ್ಣೀಮುಂಡೆ, ಯಾಕಲೇ ಮದ್ವೆ ಬ್ಯಾಡಾ ಅಂತಿದ್ದೀಯಂತೆ, ಎಲ್ಲಿದ್ದೆಯೇ'' ಕೂಗಾಡುತ್ತಲೆ ಅವ್ವನ ಮುಂದೆ ನಿಂತ್ಕಂಡ್ರು,